ಶ್ರೀ ಎಂ.ರಾಜಶೇಖರಮೂರ್ತಿ

(ಕಂದಾಯ ಸಚಿವರು)

ಹೌದು

ಸದರಿ ಕಾಮಗಾರಿಯ ಅಂದಾಜು ವೆಚ್ಚ ರೂ9.00 ಲಕ್ಷ ಆಗಬಹುದೆಂದು ಅಂದಾಜು ಪಟ್ಟಿ ತಯಾರಿಸಿದ್ದಾರೆ, ರೂ 4.00 ಲಕ್ಷ ದೇವಾಲಯದ ನಿಧಿಯಿಂದಲೂ, ಉಳಿದ ರೂ 5.00 ಲಕ್ಷ ಸರ್ಕಾರ ಅನುದಾನ ಕೇಳಲು ಸಮಿತಿಯವರು ನಿರ್ಧರಿಸಿದ್ದಾರೆ. ಸದರಿ ಅಂದಾಜು ಪಟ್ಟಿ ಮತ್ತು ನಕ್ಷೆಗೆ ನಿಯಮಾನುಸಾರ ತಾಂತ್ರಿಕ ಮಂಜೂರಾತಿಗಾಗಿ ಅಧೀಕ್ಷಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಬೆಂಗಳೂರು ಇವರಿಗೆ ಕಳುಹಿಸಲಾಗಿದೆ. ಅವರಿಂದ ಪ್ರಸ್ತಾವ ಬಂದ ನಂತರ ಪರಿಶೀಲಿಸಲಾಗುವುದು.

ಪ್ರಸ್ತಾವ ಬಂದ ನಂತರ ಪರಿಶೀಲಿಸಲಾಗುವುದು.

ವಿಷಯ : - ಅತೀ ವೃಷ್ಟಿಯಿಂದ ಹಾನಿಗೊಳಗಾದ ರೈತರಿಗೆ ಪರಿಹಾರ ನೀಡುವಲ್ಲಿ ವಿಳಂಬ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ನಂಖ್ಯೆ 341(399)

ಶ್ರೀ ಎಂ.ವಿ. ವೆಂಕಟಪ್ಪ(ಮುಳಬಾಗಿಲು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991-92ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಮನೆಗಳು, ಬೆಳೆಗಳು, ಬಾವಿಗಳು, ಪಂಪುಸೆಟ್ಟುಗಳು ಮತ್ತು ಜಾನುವಾರುಗಳೆಷ್ಟು?

ಆ) ಸದರಿ ವಿಷಯಗಳ ಬಗ್ಗೆ ಈವರೆವಿಗೆ ಸರ್ಕಾರ ಬಿಡುಗಡೆ ಮಾಡಿದ ಪರಿಹಾರದ ಮೊತ್ತವೆಷ್ಟು;

ಇ) ಈ ಜಿಲ್ಲೆಗೆ ಪರಿಹಾರ ಧನವಾಗಿ ಎಷ್ಟು ಮೊಬಲಗು ಬೇಕೆಂದು ಕೇಳಲಾಗಿತ್ತು;

ಈ) ಅತೀವೃಷ್ಟಿಯಿಂದ ಸಾರ್ವಜನಿಕ ಸರ್ಕಾರಿ ಕಟ್ಟಡ, ಕೆರೆ, ಶಾಲೆಗಳಿಗೆ ಆಗಿರುವ ನಷ್ಟವೆಷ್ಟು ಮತ್ತು ಸದರಿ ಆಸ್ತಿಗಳ ದುರಸ್ತಿಗಾಗಿ ಈವರೆವಿಗೆ ಬಿಡುಗಡೆ ಮಾಡಿದ ಪರಿಹಾರದ ಮೊಬಲಗೆಷ್ಟು;

ಉ) ಈ ಬಗ್ಗೆ ಇನ್ನೂ ಕೂಡಬೇಕಾಗಿರುವ ಪರಿಹಾರ ಧನವನ್ನು ಸರ್ಕಾರದವರು ಎಂದು ಬಿಡುಗಡೆ ಮಾಡುವರು?

ಶ್ರೀ ಎಂ. ರಾಜಶೇಖರಮೂರ್ತಿ

(ಕಂದಾಯ ಸಚಿವರು).

1991-92ನೇ ಸಾಲಿನಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಆಸ್ತಿಗಳ ವಿವರ ಈ ಕೆಳಕಂಡಂತಿದೆ.

ಅ)	1	ಪೂರ್ಣಬಿದ್ದ ಮನೆಗಳು	9,760
	2	ಭಾಗಶಃ ಬಿದ್ದ ಮನೆಗಳು	49,255
	3	ಹಾನಿಗೊಳಗಾದ ಬೆಳೆಗಳ ಪ್ರದೇಶದ ವಿಸ್ತೀರ್ಣ	57,055 ಹೆಕ್ಟೇರ್

	4	ಬಾವಿಗಳು	-ಇಲ್ಲ-
	5	ಪಂಪುಸೆಟ್ಟುಗಳು	-ಇಲ್ಲ-
	6	ಜಾನುವಾರುಗಳು	-ಇಲ್ಲ-
ಆ)	1	ಮನೆಗಳಿಗೆ	ರೂ. 395.54 ಲಕ್ಷ
	2	ಬೆಳೆಗಳ ಹಾನಿಗೆ	ರೂ. 150.00 ಲಕ್ಷ
	3	ಪರಿಹಾರ ಕಾಮಗಾರಿಗೆ	ರೂ. 179.46 ಲಕ್ಷ
		ಒಟ್ಟು	ರೂ.725.00 ಲಕ್ಷ
ಇ)		27.81 ಕೋಟಿ ರೂಪಾಯಿಗಳು	
ಈ)		ಆಗಿರುವ ನಷ್ಟದ ವಿವರಗಳು ಈ ರೀತಿ ಇವೆ (ಲಕ್ಷ ರೂ. ಗಳಲ್ಲಿ)	
	1	ಸರ್ಕಾರಿ ಕಟ್ಟಡಗಳಿಗೆ	98.77
	2	ಕೆರೆಗಳಿಗೆ	444.77
	3	ರಸ್ತೆ, ಸೇತುವೆ, ಇತ್ಯಾದಿಗಳಿಗೆ	341.17
		ಒಟ್ಟು	ರೂ.884.71ಲಕ್ಷ

ಹಾನಿಗೊಂಡ ಸಾರ್ವಜನಿಕ ಆಸ್ತಿ ಪಾಸ್ತಿಗಳ ರಿಪೇರಿಗೆ 1.00 ಕೋಟಿ ರೂ. ಪರಿಹಾರಧನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ : - ಸಂಪದಯೋಜನೆ ಜಾರಿಗೊಳಿಸುವ ಬಗ್ಗೆ ಕೊಟ್ಟಿರುವ ಆಶ್ವಾಸನೆ ಕುರಿತು.

ಚುಕ್ಕೆ ರಹಿತ ಪ್ರಶ್ನೆಯ ಸಂಖ್ಯೆ 343(408)

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) "ಸಂಪದಯೋಜನೆ"ಯನ್ನು ಜಾರಿಗೆ ತರಲಾಗುವುದೆಂದು ಸದನದಲ್ಲಿ ಆಶ್ವಾಸನೆ ಕೊಟ್ಟಿರುವುದು ನಿಜವೇ.

ಆ) ಈ ಯೋಜನೆ ಅನ್ವಯ 1ಎಕರೆಗೂ ಕಡಿಮೆ ಜಮೀನು ಹೊಂದಿರುವ ಎಷ್ಟು ಜನ ರೈತರಿಗೆ ಹೆಚ್ಚು ಆದಾಯ ಗಳಿಸಲು ಅನುಕೂಲ ಮಾಡಿಕೊಡಲಾಗಿದೆ.

ಇ) ಸಮಗ್ರ ಕೃಷಿ ವಿಸ್ತರಣಾ ಕಾರ್ಯಕ್ರಮದ ಹಿನ್ನೆಲೆಯಲ್ಲಿರುವ ಈ ಕಾರ್ಯಕ್ರಮದ ಸ್ವರೂಪವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ(ಕೃಷಿ ಸಚಿವರು).

ನಿಜ

ಈ ಯೋಜನೆಯ ರೂಪ ರೇಷೆಗಳನ್ನು ಕೃಷಿವಿಶ್ವ ವಿದ್ಯಾನಿಲಯ ಹಾಗೂ ಕೃಷಿ ಇಲಾಖೆಯೊಡನೆ ಚರ್ಚಿಸಿ ಅಂತಿಮಗೊಳಿಸಲಾಗುತ್ತಿದೆ.

ಸಮಗ್ರ ಕೃಷಿ ವಿಸ್ತರಣಾ ಕಾರ್ಯಕ್ರಮಕ್ಕೆ ಈ ಯೋಜನೆಯು ಪೂರಕವಾಗಿರುತ್ತವೆ. ಈ ಯೋಜನೆಯಡಿಯಲ್ಲಿ ಅತಿಸಣ್ಣ ರೈತರಿಗೆ ಸುಲಭ ರೀತಿಯಲ್ಲಿ ಅರ್ಥವಾಗುವಂತೆ ಕೃಷಿ ತಂತ್ರಜ್ಞಾನ